ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - 560018.

कर्नाटक-संस्कृत-विश्वविद्यालय:

श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु - ५६००१८.

**NO:KSU/S.M/2022-23** **Date:20.12.2022**

**Respected Syndicate members,**

The 66th Syndicate meeting of Karnataka Samskrit University was held on 19th of December 2022 in the University Syndicate hall. I have attached the proceedings of the meetings for your kind perusal along with this letter.

I request you to go through the proceedings. If any objection is not received within a week from the date of this letter/mail, it will be considered that the proceedings are accepted by the members.

**Thanking you,**

Registrar
Karnataka Samskrit University
Pampa Mahakavi Road, Chamarajpet,
Bengaluru - 560018. Ph: 080-26705387

**Registrar.**

**To,**

1. **Sri Shantarama Buena Siddi, Benagluru** Member
2. **Sri Ravisubramanya M.L.A, Bengaluru** Member
3. **Sri T.N. Prabhakar,** Mysuru Member
4. **Smt. Goda Gopal,** Bengaluru Member
5. **Sri Sri Dr. Basavaramananda Mahaswamiji,** Nelamangala Member
6. **Sri D.P. Anantha,** Bengaluru Member
7. **Smt. Bhavani Hegde,** Bengaluru Member
8. **Dr. C. Nanjundaiah,** Doddasomanahalli Member
7. **Dr. B. Shailashree,** Bengaluru Member
8. **Dr. Siddiq Mukkamil Ahamed,** Bengaluru Member
9. **Principal Secretary,** Dept. of Higher Education, Bengaluru Member
10. **Additional Chief Secretary,** Finance Department, Bengaluru Member
11. **Secretary,** Revenue Department (Endowment Division), Bengaluru Member
12. **Director,** Directorate of Archeology & Museum, Mysuru Member
13. **Commissioner,** Department of Public Instructions, Bengaluru Member
14. **Regional Director,** UGC- Southwest Regional Centre, Bengaluru Member
15. **Commissioner,** Directorate of Kannada & Culture, Bengaluru Member
16. **Commissioner,** Department of Collegiate Education, Bengaluru Member
17. **Director,** Department of Technical Education, Bengaluru Member
18. **Director,** Department of Pre-University Education, Bengaluru Member
19. **Director,** Directorate of Medical Education, Bengaluru Member

**Copies to:**

1. Principal Secretory, Rajbhavan, Bengaluru 560001.
2. PS to Vice Chancellor, KSU, Bengaluru.
3. Office copy.

## 2022ರ ಡಿಸೆಂಬರ್ 19ರಂದು ನಡೆದ ಪ್ರಶಾಸನ ಸಮಿತಿ (ಸಿಂಡಿಕೇಟ್) 66ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ 66ನೇ ಸಭೆಯು** ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ಡಿಸೆಂಬರ್ 19, 2022ರ ಸೋಮವಾರ ಪೂರ್ವಾಹ್ನ 11.30** ಗಂಟೆಗೆ ವಿಶ್ವವಿದ್ಯಾಲಯದ ಸಿಂಡೀಕೇಟ್ ಸಭಾಂಗಣದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

1. **ಪ್ರೊ.ವಿ.ಗಿರೀಶ್‌ಚಂದ್ರ,** ಕುಲಪತಿಗಳು(ಪ್ರ) — ಅಧ್ಯಕ್ಷರು
2. **ಶ್ರೀ.ಟಿ.ಎನ್ ಪ್ರಭಾಕರ್,** ಮೈಸೂರು — ಸದಸ್ಯರು
3. **ಶ್ರೀಮತಿ ಗೋದಾ ಗೋಪಾಲ್,** ಬೆಂಗಳೂರು — ಸದಸ್ಯರು
4. **ಡಾ. ಶ್ರೀ.ಶ್ರೀ.** ಬಸವರಮಾನಂದ **ಮಹಾಸ್ವಾಮಿ,** ಬೆಂಗಳೂರು ಗ್ರಾಮಾಂತರ ಜಿಲ್ಲೆ — ಸದಸ್ಯರು
5. **ಶ್ರೀ ಡಿ.ಪಿ.ಅನಂತ,** ಬೆಂಗಳೂರು — ಸದಸ್ಯರು
6. **ಶ್ರೀಮತಿ ಭವಾನಿ ಹೆಗಡೆ,** ಬೆಂಗಳೂರು — ಸದಸ್ಯರು
7. **ಡಾ.ಸಿ. ನಂಜುಂಡಯ್ಯ,** ರಾಮನಗರ ಜಿಲ್ಲೆ — ಸದಸ್ಯರು
8. **ಡಾ.ಸಿದ್ದಿಕ್ ಮುಕ್ಕಮಿಲ್ ಅಹಮದ್,** ಬೆಂಗಳೂರು — ಸದಸ್ಯರು
9. **ಶ್ರೀ** ರವಿಸುಬ್ರಮಣ್ಯ ಎಲ್.ಎ. ಬೆಂಗಳೂರು — ಸದಸ್ಯರು
10. **ಡಾ. ಬಿ.ಶೈಲಶ್ರೀ,** ಬೆಂಗಳೂರು — ಸದಸ್ಯರು
11. **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು — ಸದಸ್ಯರು
    – ಪರವಾಗಿ **ಶ್ರೀಮತಿ ಕಾವ್ಯಶ್ರೀ. ಎಂ**
12. **ನಿರ್ದೇಶಕರು,** ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-560001 — ಸದಸ್ಯರು
    – ಪರವಾಗಿ **ಶ್ರೀಮತಿ ಶಾಮಿಮ್ ತಾಜ್,** ಸಹಾಯಕ ನಿರ್ದೇಶಕರು
13. **ಪ್ರೊ.** ವೀರನಾರಾಯಣ **ಎನ್.ಕೆ. ಪಾಂಡುರಂಗೀ,** ಕುಲಸಚಿವರು — ಸದಸ್ಯ ಕಾರ್ಯದರ್ಶಿ

**ಗೈರುಹಾಜರಿ:**

1. **ಶ್ರೀ ಶಾಂತಾರಾಮ್ ಬುಡ್ನ** ಸಿದ್ದಿ.ಉತ್ತರ ಕನ್ನಡ ಜಿಲ್ಲೆ — ಸದಸ್ಯರು
2. **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು — ಸದಸ್ಯರು
3. **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು — ಸದಸ್ಯರು
4. **ಕಾರ್ಯದರ್ಶಿಗಳು,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು — ಸದಸ್ಯರು
5. **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ-ನೈಋತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು-09 — ಸದಸ್ಯರು
6. **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು — ಸದಸ್ಯರು
7. **ಆಯುಕ್ತರು,** ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು-560001 — ಸದಸ್ಯರು
8. **ನಿರ್ದೇಶಕರು,** ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಬೆಂಗಳೂರು-560001 — ಸದಸ್ಯರು
9. **ನಿರ್ದೇಶಕರು,** ಪದವಿಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಬೆಂಗಳೂರು-560012 — ಸದಸ್ಯರು
10. **ನಿರ್ದೇಶಕರು,** ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು-560009 — ಸದಸ್ಯರು

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಂಡಿತವಾಗಿ ನಿರ್ಣಯಗೊಂಡವು.

| ವಿ.ಸಂ. | ವಿಷಯ ಮತ್ತು ಟಿಪ್ಪಣಿ |
|---|---|
| | **ಪ್ರಶಾಸನ ಸಮಿತಿ 65ನೇ ಸಭೆಯ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗೆಗೆ.**<br>ಪ್ರಶಾಸನ ಸಮಿತಿ 65ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 16.09.2022ರಂದು ನಡೆಯಿತು. |

| | |
|---|---|
| ವಿಷಯ<br>01 | ಸಭೆಯ ನಿರ್ಣಯದಂತೆ ಕೈಗೊಳ್ಳಲಾದ ಅನುಪಾಲನೆಗಳನ್ನು ಸಿದ್ಧಪಡಿಸಿ ಅನುಪಾಲನಾ ವರದಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಅನುಮೋದಿಸಿದೆ.** |
| ವಿಷಯ<br>02 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಯುಜಿಸಿ ವೇತನ ಶ್ರೇಣಿಯ ಬೋಧಕ ಬೋಧಕೇತರ ಸಿಬ್ಬಂದಿಗಳ ನೇಮಕಾತಿ ಪರಿನಿಯಮ ಅನುಮೋದಿಸುವ ಬಗೆಗೆ.**<br>ಯುಜಿಸಿ ವೇತನ ಶ್ರೇಣಿಯ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ನೇಮಕಾತಿ ಮತ್ತು ಸಿಎಎಸ್ ಸಂಬಂಧ 'THE STATUTES RELATING TO APPOINTMENT AND PROMOTION OF TEACHERS AND OTHER ACADEMIC STAFF AND MEASURES FOR THE MAINTENANCE OF STANDARDS IN HIGHER EDUCATION IN THE KARNATAKA SAMSKRITHA VISHWAVIDYALAYA, AS PER THE UGC REGULATIONS 2018' ಪರಿನಿಯಮವನ್ನು ಯುಜಿಸಿ ನಿಯಮಾವಳಿಯನ್ವಯ ರಚಿಸಿದ್ದು, ಈ ಪರಿನಿಯಮವನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸಬೇಕಾಗಿದೆ.<br>ಹಾಗಾಗಿ, ಈ ಪರಿನಿಯಮವನ್ನು ಪ್ರಶಾಸನ ಸಮಿತಿಯ ಅನುಮೋದನೆಗೆ ಸಲ್ಲಿಸಿದೆ. |
| ನಿರ್ಣಯ | **ಅನುಮೋದಿಸಿದೆ.** |
| ವಿಷಯ<br>03 | **ಮೈಸೂರಿನ ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿನಿಲಯವನ್ನು ಸಮಾಜ ಕಲ್ಯಾಣ ಇಲಾಖೆಗೆ ವರ್ಗಾಯಿಸುವ ಬಗೆಗೆ.**<br>ಸರ್ಕಾರದ ಪತ್ರಸಂಖ್ಯೆ:ಇಡಿ 172 ಹೆಚ್‌ಪಿಯು 2022, ದಿನಾಂಕ:13.10.2022ರಂತೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಎಸ್‌ಸಿಪಿ/ಟಿಎಸ್‌ಪಿ ಅನುದಾನದಡಿಯಲ್ಲಿ ನಿರ್ಮಿಸಲಾಗಿದ್ದ ಮೈಸೂರಿನ ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿನಿಲಯವನ್ನು ಸಮಾಜ ಕಲ್ಯಾಣ ಇಲಾಖೆಗೆ ಹಸ್ತಾಂತರಿಸುವ ಬಗ್ಗೆ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಸರ್ಕಾರವು ಸೂಚಿಸಿರುತ್ತದೆ.<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ 2011-12ರಿಂದ 2014-15ರವರೆಗೆ ಸ್ವೀಕೃತವಾಗಿದ್ದ ಎಸ್‌ಸಿಪಿ/ಟಿಎಸ್‌ಪಿ ಅನುದಾನದಡಿಯಲ್ಲಿ ಒಟ್ಟು 163.80 ಲಕ್ಷಗಳ ವೆಚ್ಚದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿನಿಲಯವನ್ನು ನಿರ್ಮಿಸಲಾಗಿದೆ.<br>ಮೈಸೂರು ನಗರದಲ್ಲಿ ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು, ಜೆ. ಎಸ್. ಎಸ್. ಸಂಸ್ಕೃತ ಕಾಲೇಜು, ಮತ್ತು ಶ್ರೀ ಶಂಕರ ವಿಲಾಸ ಕಾಲೇಜು ಹೀಗೆ 03 ಕಾಲೇಜುಗಳಿವೆ. ಈ ಕಾಲೇಜುಗಳಲ್ಲಿ ಒಟ್ಟು 593 ವಿಧ್ಯಾರ್ಥಿಗಳಿದ್ದು, ಇದರಲ್ಲಿ 40 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಧ್ಯಾರ್ಥಿಗಳಿದ್ದಾರೆ.<br>ಈ ಬಗ್ಗೆ ಮುಂದಿನ ಪ್ರಕ್ರಿಯೆಗಾಗಿ ಪ್ರಶಾನ ಸಮಿತಿಯ ನಿರ್ದೇಶನಕ್ಕಾಗಿ ಸಲ್ಲಿಸಿದೆ. |
| ನಿರ್ಣಯ | **ಈ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಲು ಈ ಕೆಳಕಂಡವರನ್ನೊಳಗೊಂಡಂತೆ ಸಮಿತಿಯನ್ನು ರಚಿಸಲಾಯಿತು.**<br>1. ಶ್ರೀಮತಿ ಗೋದಾ ಗೋಪಾಲ್, ಪ್ರಶಾಸನ ಸಮಿತಿ ಸದಸ್ಯರು, ಕಸಂವಿ. — ಅಧ್ಯಕ್ಷರು<br>2. ಪ್ರೊ. ಸಿ. ಪಾಲಯ್ಯ, ಪ್ರಾಧ್ಯಾಪಕರು, ಕಸಂವಿ. — ಸದಸ್ಯರು<br>3. ಡಾ. ಮಹದೇವಯ್ಯ, ಕೆ.ಎಂ. ಪ್ರಾಂಶುಪಾಲರು, ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು, — ಸದಸ್ಯರು<br>4. ಡಾ. ದಯಾಶಂಕರ, ಪ್ರಾಂಶುಪಾಲರು, ಶ್ರೀಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು, — ಸದಸ್ಯರು |
| ವಿಷಯ<br>04 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ವಿಶ್ವವಿದ್ಯಾಲಯಕ್ಕೆ ಒಳಪಡುವ ಅಧೀನ ಕಾಲೇಜುಗಳು/ಸಂಶೋಧನಾ ಸಂಸ್ಥೆಗಳು/ಶೈಕ್ಷಣಿಕ ಕೇಂದ್ರಗಳಲ್ಲಿ ನಡೆಸುವ ಎಲ್ಲಾ ವಿಷಯಗಳ ಡಿಪ್ಲೋಮಾ/ಅಡ್ವಾನ್ಸ್ ಡಿಪ್ಲೋಮಾ/ಪಿ.ಜಿ ಡಿಪ್ಲೋಮಾ/ಸರ್ಟಿಫಿಕೇಟ್ ಕೋರ್ಸ್‌ಗಳ ಪ್ರಮಾಣ ಪತ್ರಗಳಿಗೆ ಶುಲ್ಕಗಳನ್ನು ನಿಗಧಿಪಡಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ವಿಶ್ವವಿದ್ಯಾಲಯಕ್ಕೆ ಒಳಪಡುವ ಅಧೀನ ಕಾಲೇಜುಗಳು/ಸಂಶೋಧನಾ ಸಂಸ್ಥೆಗಳು/ಶೈಕ್ಷಣಿಕ ಕೇಂದ್ರಗಳಲ್ಲಿ ನಡೆಸುವ ಎಲ್ಲಾ ವಿಷಯಗಳ ಡಿಪ್ಲೋಮಾ/ಅಡ್ವಾನ್ಸ್ ಡಿಪ್ಲೋಮಾ/ಪಿ.ಜಿ ಡಿಪ್ಲೋಮಾ/ಸರ್ಟಿಫಿಕೇಟ್ ಕೋರ್ಸ್‌ಗಳ ಪ್ರಮಾಣ ಪತ್ರಗಳಿಗೆ ಶುಲ್ಕಗಳನ್ನು ನಿಗಧಿಪಡಿಸುವ ಸಲುವಾಗಿ ಸಮಿತಿಯನ್ನು ನೇಮಿಸಲಾಗಿದ್ದಿತು. ಈ ಸಮಿತಿಯು ಶುಲ್ಕಗಳನ್ನು ನಿರ್ಧರಿಸಿ ತನ್ನ ವರದಿಯನ್ನು ಸಲ್ಲಿಸಿದ್ದಿತು. ಈ ವರದಿಯನುಸಾರ 2019-20 ಮತ್ತು 2020-21ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ ಶುಲ್ಕಗಳನ್ನು ನಿಗಧಿಪಡಿಸಿ ಜಾರಿಗೆ ತರಲಾಗಿದೆ. ಸಮಿತಿಯು ನೀಡಿರುವ ವರದಿ ಹಾಗೂ ಜಾರಿಗೊಳಿಸಿದ ಆದೇಶವನ್ನು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಅನುಮೋದಿಸಿದೆ.** |

| | |
|---|---|
| ವಿಷಯ 05 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪರೀಕ್ಷಾಂಗವು ನಡೆಸುವ ಬಿ.ಎ. ಮತ್ತು ಎಂ.ಎ, ಸರ್ಟಿಫಿಕೇಟ್ ಕೋರ್ಸ್, ಡಿಪ್ಲೋಮೋ, ಪಿ.ಜಿ ಡಿಪ್ಲೋಮೋ ಹಾಗೂ ಇತರ ಎಲ್ಲಾ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ವಿಲೇವಾರಿ ಮಾಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪರೀಕ್ಷಾಂಗವು ನಡೆಸುವ ಬಿ.ಎ. ಮತ್ತು ಎಂ.ಎ, ಸರ್ಟಿಫಿಕೇಟ್ ಕೋರ್ಸ್, ಡಿಪ್ಲೋಮೋ, ಪಿ.ಜಿ ಡಿಪ್ಲೋಮೋ ಹಾಗೂ ಇತರ ಎಲ್ಲ ಪರೀಕ್ಷೆಗಳ ಕಳೆದ ನಾಲ್ಕೈದು ವರ್ಷಗಳ ಉತ್ತರ ಪತ್ರಿಕೆಗಳನ್ನು ಇನ್ನೂ ಹಾಗೆಯೇ ಇಟ್ಟುಕೊಳ್ಳಲಾಗಿದೆ. ಆದರೆ, ಪರೀಕ್ಷೆ ನಡೆದ ದಿನಾಂಕದಿಂದ ಕೂಡಲೇ ಯೋಗ್ಯ ರೀತಿಯಲ್ಲಿ ವಿಲೇವಾರಿ ಮಾಡುವುದು ಹಾಗೂ ಮರುಮೌಲ್ಯಮಾಪನಪರ್ಯಂತ ಇರಿಸಿಕೊಳ್ಳುವುದು ಸೂಕ್ತ. ಅದಾದ ನಂತರ ವಾರ್ಷಿಕ ವಿಲೇವಾರಿ ಮಾಡಬೇಕಾಗಿದೆ. ಈ ರೀತಿಯಾಗಿ ವಿಲೇವಾರಿ ಮಾಡುವ ಸಂದರ್ಭದಲ್ಲಿ ಯಾವುದೇ ಪತ್ರಿಕೆಗಳು ಎಲ್ಲಿಯೂ ದುರ್ಬಳಕೆ ಆಗದಂತೆ ಎಚ್ಚರಿಗೆ ವಹಿಸಬೇಕಾಗಿದೆ. ಹಾಗಾಗಿ ಸರ್ಕಾರದ ಸ್ವಾಮ್ಯದ ಯಾವುದಾದರೂ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡು ಕಾರ್ಯನಿರ್ವಹಿಸಬೇಕಾಗಿದೆ.<br>ಹಾಗಾಗಿ ವಿಲೇವಾರಿ ಮಾಡುವ ಕುರಿತು ಪ್ರಶಾಸನ ಸಮಿತಿಯ ಮುಂದೆ ಮಂಡಿಸಿ ಮುಂದಿನ ನಿರ್ದೇಶನ ಕೋರಿದೆ. |
| ನಿರ್ಣಯ | **ನಿಯಮಾನುಸಾರ ವಿಲೇವಾರಿ ಮಾಡುವಂತೆ ಸೂಚಿಸಿ ಅನುಮೋದಿಸಿದೆ.** |
| ವಿಷಯ 06 | **2021–22ನೇ ಸಾಲಿನ ಬಿ.ಎ ಹಾಗು ಎಂ.ಎ. ತರಗತಿಗಳಲ್ಲಿ ಐದು ಜನ ವಿದ್ಯಾರ್ಥಿಗಳು ಅವಧಿ ಮೀರಿದ್ದು ಅನುಮತಿ ಪಡೆಯದೆ ಪರೀಕ್ಷೆ ಬರೆದಿದ್ದು, ಇವರ ಫಲಿತಾಂಶವನ್ನು ತಡೆಹಿಡಿಯಲಾಗಿದೆ.**<br>2021–22ನೇ ಸಾಲಿನ ಬಿ.ಎ ಹಾಗು ಎಂ.ಎ. ತರಗತಿಗಳಲ್ಲಿ ಈ ಕೆಳಕಂಡ ಐದು ಜನ ವಿದ್ಯಾರ್ಥಿಗಳು ಅವಧಿ ಮೀರಿ (ಬಿ.ಎ. ವಿದ್ಯಾರ್ಥಿಗಳಿಗೆಗೆ 3+3 ಎಂಬುದಾಗಿಯೂ ಎಂ.ಎ. ವಿದ್ಯಾರ್ಥಿಗಳಿಗೆ 2+2 ಅವಧಿ ಎಂಬುದು ಎಲ್ಲ ವಿಶ್ವವಿದ್ಯಾಲಯಗಳಲ್ಲಿರುವ ಸಾಮಾನ್ಯ ನಿಯಮ) ಅನುಮತಿ ಪಡೆಯದೆ ಪರೀಕ್ಷೆಗಳನ್ನು ಬರೆದಿದ್ದು, ಇವರ ಫಲಿತಾಂಶವನ್ನು ತಡೆಹಿಡಿಯಲಾಗಿದೆ.<br>1. ಈಶ್ವರ್ ಲಾಲ್ ಶರ್ಮ – ಬಿ.ಎ. ಪ್ರಥಮ ವರ್ಷದ ವಿಧ್ಯಾರ್ಥಿ<br>2. ರೋಹಿಣಿ ಕುಲಕರ್ಣಿ – ಬಿ.ಎ. ದ್ವಿತಿಯ ವರ್ಷದ ವಿಧ್ಯಾರ್ಥಿ<br>3. ಈಶ್ವರ್ ಲಾಲ್ ಶರ್ಮ – ಬಿ.ಎ. ದ್ವಿತೀಯ ವರ್ಷದ ವಿಧ್ಯಾರ್ಥಿ<br>4. ವೀರಪ್ಪ – ಬಿ.ಎ. ತೃತೀಯ ವರ್ಷದ ವಿಧ್ಯಾರ್ಥಿ<br>5. ನಯನಾ – ಎಂ.ಎ. ಪ್ರಥಮ ಸೆಮಿಸ್ಟಾರ್<br>ಈ ವಿಷಯವನ್ನು ಪ್ರಶಾಸನ ಸಮಿತಿಯ ಮುಂದೆ ಮುಂದಿನ ನಿರ್ದೇಶನಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಗಮನಿಸಲಾಯಿತು. ಕೋವಿಡ್–19 ಮಹಾಮಾರಿ ಕಾರಣದಿಂದಾಗಿ ಈ ಒಂದು ಬಾರಿ ಮಾತ್ರ ಅನುಮತಿಸಲು ತೀರ್ಮಾನಿಸಲಾಯಿತು. ಮುಂದೆ ಈ ರೀತಿಯ ಪ್ರಕರಣಗಳು ಮರುಕಳಿಸದಂತೆ ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರಿಗೆ ಸೂಚಿಸಲು ನಿರ್ದೇಶಿಸಲಾಯಿತು.** |
| ವಿಷಯ 07 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಪ್ರತಿವರ್ಷ ನಡೆಸುವ ರಾಜ್ಯಸ್ತರೀಯ ಶಾಸ್ತ್ರೀಯ ಸ್ಪರ್ಧೆಗಳಲ್ಲಿ ನಿರ್ಣಾಯಕರಾಗಿ ಭಾಗವಹಿಸುವ ವಿದ್ವಾಂಸರಿಗೆ ಸ್ಪರ್ಧೆಯೊಂದಕ್ಕೆ ಗೌರವ ಸಂಭಾವನೆ 650.00 ರೂ.ಗಳಿಂದ 1000 ರೂ.ಗಳಿಗೆ ಹೆಚ್ಚಿಸಿ ನೀಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಪ್ರತಿವರ್ಷ ನಡೆಸುವ ರಾಜ್ಯಸ್ತರೀಯ ಶಾಸ್ತ್ರೀಯ ಸ್ಪರ್ಧೆಗಳಲ್ಲಿ ನಿರ್ಣಾಯಕರಾಗಿ ಭಾಗವಹಿಸುವ ವಿದ್ವಾಂಸರಿಗೆ ಕಳೆದ ಆರು ವರ್ಷಗಳಿಂದ 650.00 ರೂ.ಗಳನ್ನು ಸ್ಪರ್ಧೆಯೊಂದಕ್ಕೆ ಗೌರವ ಸಂಭಾವನೆಯನ್ನು ನೀಡುತ್ತಿತ್ತು. ಆದರೆ ಪ್ರಸ್ತುತ ಕಾಲಕ್ಕೆ ಈ ಮೊತ್ತವು ಅತ್ಯಂತ ಕಡಿಮೆಯಾಗುವುದರಿಂದ ದಿನಾಂಕ:17.03.2022ರಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಲ್ಲಿ ನಡೆದ ರಾಜ್ಯಸ್ತರದ ಶಾಸ್ತ್ರೀಯ ಸ್ಪರ್ಧೆಯಲ್ಲಿ ನಿರ್ಣಾಯಕರಾಗಿ ಆಗಮಿಸುವ ವಿದ್ವಾಂಸರಿಗೆ ಸ್ಪರ್ಧೆಯೊಂದಕ್ಕೆ ಗೌರವ ಸಂಭಾವನೆಯಾಗಿ ರೂಪಾಯಿ 1000.00 ರೂಪಾಯಿಗಳನ್ನಾದರೂ ನೀಡಬೇಕೆಂಬುದಾಗಿ ಸಂಯೋಜಕರು ಸಭೆ ಸೇರಿ ನಿರ್ಣಯಿಸಿದ ಕೋರಿಕೆಯನ್ನು ಪ್ರಶಾಸನ ಸಮಿತಿಯ ಅನುಮತಿಯನ್ನು ನಿರೀಕ್ಷಿಸಿ, ರೂಪಾಯಿ 650.00 ರಿಂದ 1000.00ಕ್ಕೆ ಹೆಚ್ಚಿಸಿ ನಿಗದಿಪಡಿಸಲಾಗಿರುತ್ತದೆ.<br>ಹಾಗಾಗಿ, ಈ ವಿಷಯವನ್ನು ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಅನುಮೋದಿಸಿದೆ.** |
| ವಿಷಯ 08 | **NAAC ಉದ್ದೇಶಿತ ಕಾಮಗಾರಿಗಳ ಅನುಮೋದನೆ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು UGC NAAC ಮಾನ್ಯತೆ ಪಡೆಯಲು ಸಿದ್ದತೆ ಮಾಡಿಕೊಳ್ಳುತ್ತಿದೆ. NAAC ಸಿದ್ದತೆಯ ಭಾಗವಾಗಿ ಹಾಗೂ NAAC ಉದ್ದೇಶಕ್ಕಾಗಿ ವಿಶ್ವವಿದ್ಯಾಲಯದ ಆವರಣದಲ್ಲಿ ದ್ವಿಚಕ್ರ – 4 ಚಕ್ರ ವಾಹನಗಳ ನಿಲುಗಡೆ ವ್ಯವಸೆ, ಯಜ್ಞಶಾಲೆ, ಉದ್ಯಾನ ಹಾಗೂ ಕ್ರಿಡಾಂಗಣ ಕಾಮಗಾರಿಗಳಿಗಾಗಿ Estimate |

| | |
|---|---|
| | ಸಲ್ಲಿಸುವಂತೆ KRIDL ರವರಿಗೆ ಕೋರಲಾಗಿದ್ದಿತು. KRIDL ಸಂಸ್ಥೆಯು ಈ ಹೇಳಲಾದ ಕಾಮಗಾರಿಗಳಿಗಾಗಿ ರೂ. 20,50,000/- ಗಳ ಅಂದಾಜು Estimate ನ್ನು ಸಲ್ಲಿಸಿದ್ದು, ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಸಲ್ಲಿಸಿದೆ. |
| ನಿರ್ಣಯ | ಅನುಮೋದಿಸಿದೆ. |

ಕುಲಸಚಿವರು
ಕುಲಸಚಿವರು
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು - 560018.

ಕುಲಪತಿಗಳು
VICE-CHANCELLOR
KARNATAKA SAMSKRIT UNIVERSITY
BENGALURU-560018